# ಭಾರತದ ಸಂಸತ್ತಿನಲ್ಲಿ ರಾಜಕೀಯ ಪಕ್ಷಗಳ ಪಾತ್ರ

**ಡಾ. ಚನ್ನಬಸವ**
ರಾಜ್ಯಶಾಸ್ತ್ರ ಅಧ್ಯಯನ ವಿಭಾಗ,
ರಾಯಚೂರು ವಿಶ್ವವಿದ್ಯಾಲಯ, ಯರಗೇರಾ, ರಾಯಚೂರು-584133

**ಪೀಠಿಕೆ**

ರಾಜಕೀಯ ಪಕ್ಷಗಳಿಲ್ಲದ ಪ್ರಜಾಪ್ರಭುತ್ವವನ್ನು ಕಾಣಲು ಅಸಾಧ್ಯ. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ಮತ್ತು ಜನತೆಯ ನಡುವಿನ ಬಾಂಧವ್ಯದ ಸೇತುವೆ ನಿರ್ಮಿಸುವಲ್ಲಿ ಹಾಗೂ ರಾಷ್ಟ್ರದ ಆಡಳಿತ ವ್ಯವಸ್ಥೆಯಲ್ಲಿ ಪಕ್ಷಗಳನ್ನು ಕೇಂದ್ರಬಿಂದುವೆಂದು ಪರಿಗಣಿಸಲಾಗುತ್ತದೆ. ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿರುವಂತಹ ರಾಷ್ಟ್ರಗಳಲ್ಲಿ ಪಕ್ಷಪದ್ಧತಿ ಸರ್ಕಾರ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುವುದಕ್ಕೆ ಸಹಾಯಕಾರಿಯಾಗುತ್ತದೆ. ರಾಜಕೀಯ ಪಕ್ಷಗಳ ಪ್ರಮುಖ ಕಾರ್ಯವೆಂದರೆ ಮತದಾರರ ಆಕರ್ಷಣೆ, ಅವರ ಮೇಲೆ ಪ್ರಭಾವ ಬೀರುವುದು ಮತ್ತು ಚುನಾವಣೆಯಲ್ಲಿ ಗೆಲ್ಲುವುದೇ ಆಗಿರುತ್ತದೆ. ಇದಕ್ಕಾಗಿ ತಮ್ಮದೆ ಆದ ನೀತಿ ಮತ್ತು ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ತಮ್ಮ ಚುನಾವಣಾ ಪ್ರಣಾಳಿಕೆಯನ್ನು ಪ್ರಕಟಿಸುತ್ತವೆ. ಚುನಾವಣಾ ಆಯೋಗದ ಅನುಮತಿಯ ಮೇರೆಗೆ ಯಾರು ಯಾವಾಗ ಬೇಕಿದ್ದರು ಹೊಸ ಪಕ್ಷಗಳನ್ನು ಸಂಘಟಿಸಬಹುದು.

ರಾಜಕೀಯ ಘಟಕಗಳಾಗಿ ಸಂಘಟಿತರಾಗಿರುವ ಮತ್ತು ಮತಾಧಿಕಾರದಿಂದ ಸರ್ಕಾರದ ಆಡಳೀತವನ್ನು ನಿಯಂತ್ರಿಸಲು ಹಾಗೂ ಅದರ ಸಾಮಾನ್ಯ ಧೋರಣೆಗಳನ್ನು ಈಡೇರಿಸಲು ಉದ್ದೇಶಿಸಿರುವ ನಾಗರಿಕ ಗುಂಪು. ಹಲವಾರು ವ್ಯಕ್ತಿಗಳು ಒಟ್ಟಿಗೆ ಸೇರಿ ತಮ್ಮದೇ ಆದ ರಾಜಕೀಯ ತತ್ವಗಳನ್ನು ಅಳವಡಿಸಿಕೊಂಡು ಚುನಾವಣೆಯಲ್ಲಿ ಸ್ಪರ್ಧಿಸಿ ರಾಜಕೀಯ ಅಧಿಕಾರವನ್ನು ಪಡೆಯಲು ಯತ್ನಿಸುವ ಗುಂಪಿಗೆ ರಾಜಕಿಯ ಪಕ್ಷ ಎಂದು ಕರೆಯಬಹುದು.

ಕೆಲವು ತತ್ವಗಳ ಆಧಾರದ ಮೇಲೆ ರಾಷ್ಟ್ರೀಯ ಹಿತಾಸಕ್ತಿಗಳನ್ನು ಸಂಯುಕ್ತ ಪ್ರಯತ್ನಗಳಿಂದ ವೃದ್ಧಿಗೊಳಿಸಲು ಒಟ್ಟಾಗಿ ಸೇರುವ ಅನೇಕ ವ್ಯಕ್ತಿಗಳ ಸಂಘಟನೆಯೇ ರಾಜಕೀಯ ಪಕ್ಷ – ಎಡ್ಮಂಡ್ ಬರ್ಕ್.

**ಬಹುಪಕ್ಷ ಪದ್ಧತಿ**

ಎರಡು ರಾಜಕೀಯ ಪಕ್ಷಗಳಿರುವುದನ್ನು ದ್ವಿಪಕ್ಷ ಪದ್ಧತಿ ಮತ್ತು ಎರಡಕ್ಕಿಂತ ಹೆಚ್ಚು ರಾಜಕೀಯ ಪಕ್ಷಗಳಿರುವುದನ್ನು ಬಹುಪಕ್ಷ ಪದ್ಧತಿ ಎನ್ನುವರು. ಭಾರತದಲ್ಲಿ ಅನೇಕ ರಾಜಕೀಯ ಪಕ್ಷಗಳು ಇರುವುದರಿಂದ ಬಹುಪಕ್ಷ ಪದ್ಧತಿ ಕಂಡು ಬರುವುದು. ಕಾರಣ ವಿವಿಧ ಧರ್ಮಗಳು, ಜನಾಂಗಗಳು, ಪ್ರದೇಶಗಳು, ಭಾಷೆಗಳು ಮತ್ತು ವಿಭಿನ್ನ ಸಂಸ್ಕೃತಿಗಳು ಇರುವುದರಿಂದ ಹಲವಾರು ಪಕ್ಷಗಳು ಉಗಮವಾಗಿವೆ. ಉದಾ: ಕಾಂಗ್ರೆಸ್ ಭಾಜಪಾ, ಸಮಾಜವಾದಿ, ಸಿಪಿಎಂ, ಸಿಪಿಐ, ಎನ್‌ಸಿಪಿ, ಮುಂತಾದವು. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರಜಾಸತ್ಯಯಲ್ಲಿ ಎರಡು ಪ್ರಮುಖ ಪಾತ್ರ ವಹಿಸುವ ರಾಜಕೀಯ ಪಕ್ಷ ಪದ್ಧತಿ ಕಂಡು ಬರುವುದು. ಉದಾ: ಅಮೆರಿಕಾದ ಡೆಮಾಕ್ರಟಿಕ್ ಮತ್ತು ರಿಪಬ್ಲಿಕನ್, ಇಂಗ್ಲೆಂಡನ್ ಕನ್ಸರ್ವೆಟಿವ್ ಮತ್ತು ಲೇಬರ ಪಕ್ಷ.[1]

**ರಾಜಕೀಯ ಪಕ್ಷಗಳ ಜವಾಬ್ದಾರಿ**

ಪ್ರಜಾಪ್ರಭುತ್ವದ ತಳಹದಿಯೇ ಪಕ್ಷಪದ್ಧತಿಯಾಗಿದ್ದರಿಂದ ಸಂಸತ್ತಿನಲ್ಲಿ ಒಂದು/ಕೆಲವು ಪಕ್ಷವು/ಗಳು ಆಡಳತ ಪಕ್ಷವಾದರೆ ಉಳಿದ ಪಕ್ಷಗಳು ವಿರೋಧ ಪಕ್ಷಗಳಾಗಿ ಕಾರ್ಯ ನಿರ್ವಹಿಸುತ್ತವೆ. ಸಂಸತ್ತಿನಲ್ಲಿ ದಕ್ಷ ವಿರೋಧ ಪಕ್ಷವಿದ್ದಾಗ ಮಾತ್ರ ಅಲ್ಲಿ ಆಡಳಿತಾರೂಢ ಪಕ್ಷ ತನ್ನ ಆಡಳಿತವನ್ನು ಜವಾಬ್ದಾರಿಯಿಂದ ನಿರ್ವಹಿಸುವುದು. ಎಲ್ಲಿ ಪ್ರಬಲವಾದ ವಿರೋಧ ಪಕ್ಷಗಳಿರುವವೂ ಅಲ್ಲಿ ಜವಾಬ್ದಾರಿಯುತ ಸರ್ಕಾರ ಕಂಡುಬರುವುದು.

---

[1] ರಾಜಶೇಖರ, ಎಚ್. ಎಂ., (2009). ಭಾರತ ಸರ್ಕಾರ ಮತ್ತು ರಾಜಕೀಯ, ಮೈಸೂರು; ಕಿರಣ ಪ್ರಕಾಶನ

ಸಂಸತ್ತಿನಲ್ಲಿ ವಿರೋಧ ಪಕ್ಷವು ಯಾವಾಗಲು ಆಡಳಿತಾರೂಡ ಪಕ್ಷದ ಆಗುಹೋಗುಗಳನ್ನು ಗಮನಿಸುತ್ತಲೇ ಇರುವುದರಿಂದಲೇ ವಿರೋಧ ಪಕ್ಷವನ್ನು 'ಕಾವಲು ನಾಯಿ' (Watch Dog) ಗೆ ಹೋಲಿಕೆ ಮಾಡಲಾಗಿದೆ. ವಿರೋಧ ಪಕ್ಷಗಳ ಜವಾಬ್ದಾರಿಯೆಂದರೆ ಆಡಳಿತಾರೂಢ ಪಕ್ಷದ ಅಥವಾ ಸರ್ಕಾರದ ಎಲ್ಲ ತಿರ್ಮಾನ ಹಾಗೂ ಕಾರ್ಯಕ್ರಮಗಳನ್ನು ವಿರೋದಿಸುವುದಲ್ಲ. ಸರ್ಕಾರ ಕೈಗೊಳ್ಳುವಂತಹ ರಚನಾತ್ಮಕ ಕಾರ್ಯ ಯೋಜನೆಗಳಿಗೆ ಬೆಂಬಲ ನೀಡುವ ಹಾಗೂ ಅದು ಕೈಗೊಳ್ಳುವಂತಹ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಹಕರಿಸುವಂತಹ ವಿಶಾಲ ಭಾವನೆಯನ್ನು ಹೊಂದಿರಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷವು ಆಡಳಿತಾರೂಢ ಪಕ್ಷದಷ್ಟೇ ಪ್ರಾಮುಖ್ಯತೆಯನ್ನು ಹಾಗೂ ಜವಾಬ್ದಾರಿಯನ್ನು ಹೊಂದಿರುವುದರಿಂದ ಆಡಳಿತಾರೂಢ ಪಕ್ಷ ಮಾಡುವಂತಹ ತಪ್ಪುಗಳ ಬಗೆಗೆ ಎಚ್ಚರಿಕೆಯಿಂದ ಕಾರ್ಯವನ್ನು ಅಥವಾ ಪಾತ್ರವನ್ನು ನಿರ್ವಹಿಸಿ ಸರ್ಕಾರವನ್ನು ಒರೆಗಲ್ಲಿಗೆ ಹಚ್ಚುವುದು ಹಾಗೂ ಜನತೆಯ ವಿಶ್ವಾಸವನ್ನು ಗಳಿಸಲು ಅವಕಾಶವಾಗುವಂತಹ ಕಾರ್ಯಗಳನ್ನು ನಿರ್ವಹಿಸುವುದು ಅತ್ಯವಶ್ಯಕ.[2]

**ಸಂಸತ್ತಿನ ಒಳಗೂ ಹಾಗೂ ಹೊರಗೂ ರಾಜಕೀಯ ಪಕ್ಷಗಳ ಕಾರ್ಯಗಳು**

1. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು ಚುನಾವಣೆಗೆ ಸರಿಯಾದ ವ್ಯಕ್ತಿಗಳನ್ನು ಆಯ್ಕೆ ಮಾಡುವುದು.
2. ನೀತಿ–ನಿರ್ಣಯ ಕೈಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.
3. ಪಕ್ಷಗಳು ಸರ್ಕಾರ ರಚನೆ ಮಾಡುತ್ತವೆ ಮತ್ತು ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸುತ್ತವೆ.
4. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಕ್ಷಗಳು ಇಡೀ ದೇಶದ ಜನತೆಯನ್ನು ಪ್ರನಿಧಿಸುತ್ತವೆ.
5. ರಾಜಕೀಯ ಪಕ್ಷಗಳು ಸರ್ಕಾರ ಮತ್ತು ಜನರ ನಡುವೆ ಸಂಪರ್ಕ ಒದಗಿಸಿ, ಮತದಾರರಿಗೆ ರಾಜಕೀಯ ಶಿಕ್ಷಣದ ತಿಳುವಳಿಕೆ ನೀಡಿ ಅವರನ್ನು ಸಕ್ರಿಯಗೊಳಿಸಲು ಪ್ರಯತ್ನಿಸುತ್ತವೆ.
6. ಸಂಸದೀಯ ಪದ್ಧತಿಯ ಸರ್ಕಾರದ ಕಾರ್ಯ ನಿರ್ವಹಣೆಗೆ ರಾಜಕೀಯ ಪಕ್ಷಗಳು ಅತ್ಯಾವಶ್ಯಕವಾಗಿವೆ. ಇವುಗಳ ಅಸ್ತಿತ್ವದಿಂದಾಗಿಯೇ ಸಂಸದೀಯ ಪ್ರಜಾಪ್ರಭುತ್ವ ಸರ್ಕಾರದ ಕಾರ್ಯನಿರ್ವಹಣೆ ಸಾಧ್ಯವಾಗಿದೆ.
7. ರಾಜಕೀಯ ಪಕ್ಷಗಳು ಸಮಸ್ಯೆಗಳನ್ನು ಪ್ರಸ್ತಾಪಿಸಿ ಜನತೆಯ ಕಲ್ಯಾಣಕ್ಕಾಗಿ ಶ್ರಮಿಸುತ್ತವೆ.
8. ಪ್ರಜಾಸತೆಯು ಯಶಸ್ವಿಯಗಬೇಕಾದರೆ ಜನತೆಯನ್ನು ಸಂಘಟಿಸಬೇಕು.[3]

**ಸಂಸತ್ತಿನಲ್ಲಿ ರಾಜಕೀಯ ಪಕ್ಷಗಳ ಪ್ರಭಾವ**

1960–70ರ ದಶಕದಲ್ಲಿ ರಾಜಕೀಯ ಪಕ್ಷಗಳು ಸಂಸತ್ತಿನ ಮೇಲೆ ಬಹಳಷ್ಟು ಪ್ರಭಾವ ಬಿರಿದ್ದವು. ಪಕ್ಷಗಳು ಸಾಮಾಜಿಕ ಸಮಸ್ಯೆಗಳನ್ನು ಪ್ರಸ್ಥಾಪಿಸಿ ರಾಜಕೀಯ ನೀತಿಗಳನ್ನಾಗಿ ಮಾರ್ಪಡಿಸುವಲ್ಲಿ ಇವುಗಳ ಪಾತ್ರ ಮಹತ್ವದಾಗಿತ್ತು. ಜನತೆ ಮತ್ತು ಸರ್ಕಾರದ ನಡುವೆ ಸಂಬಂಧ ಕಲ್ಪಸಲು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಜವಾಹರ ರೋಜಗಾರ ಯೋಜನೆ, ಆಹಾರ ಭದ್ರತಾ ಮಸೂದೆ ಇವುಗಳನ್ನು ಜಾರಿಗೆ ತರುವಲ್ಲಿ ಪಕ್ಷಗಳ ಪ್ರಭಾವ ಕಂಡುಬರುವುದು. ಮಾಹಿತಿ ಹಕ್ಕು ಕಾಯಿದೆಯ ಅಧೀನದಲ್ಲಿ ರಾಜಕೀಯ ಪಕ್ಷಗಳು ಇರಬೇಕೆಂದು ನ್ಯಾಯಾಲಯದ ತೀರ್ಪಿನ ವಿರುದ್ಧ ಸಂಸತ್ತಿನಲ್ಲಿ ಆಡಳತ ಪಕ್ಷದೊಂದಿಗೆ ವಿರೋಧ ಪಕ್ಷಗಳು ಸಹ ಚುನಾವಣಾ ಪೂರ್ವ ಹಾಗೂ ಚುನಾವಣಾ ನಂತರದ ಸರ್ಕಾರ ರಚಿಸುವಲ್ಲಿ ಪ್ರಭಾವ ಬಿರುತ್ತಲಿವೆ ಎಂದು ಹೇಳಬಹುದು.

ರಾಜಕೀಯ ಪಕ್ಷಗಳನ್ನು ಹೊರತುಪಡಿಸಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದೇಶವನ್ನು ಮುನ್ನಡೆಸಲು ಅಸಾಧ್ಯ. ಜಯಪ್ರಕಾಶ ನಾರಾಯಣ ಹೇಳುವಂತೆ "ರಾಜಕೀಯ ಪಕ್ಷಗಳಿಂದ ದೇಶದಲ್ಲಿ ನಾಮನಿರಂಕುಶ ಪ್ರಭುತ್ವ ಕಂಡು ಬರುವುದು. ಉದಾ: 1975ರಲ್ಲಿ ಇಂದಿರಾ ಗಾಂಧಿಯವರ ಆಡಳಿತ, ನಿರಂಕುಶ ಪ್ರಭುತ್ವ ತೆಗೆದು ಹಾಕಲು ಸಂಸದೀಯ ಪ್ರಜಾಪ್ರಭುತ್ವಕ್ಕೆ ರಾಜಕೀಯ ಪಕ್ಷಗಳು ಬಹುಮುಖ್ಯ. ಇಂದು ದೇಶವಿರೋಧಿ ಮತ್ತು ಸಮಾಜ ವಿರೋಧಿ ಚಟುವಟಿಕೆಗಳು ದೇಶಕ್ಕೆ ಸವಾಲಾಗಿ ಪರಿಣಮಿಸಿವೆ. ಆದ್ದರಿಂದ ಇವುಗಳ ನಿವಾರಣೆಗೆ ಸಂಸತ್ತಿನಲ್ಲಿ ರಾಜಕೀಯ ಪಕ್ಷಗಳ ಪಾತ್ರ ಮಹತ್ವವಾದದ್ದು.

**ರಾಜಕೀಯ ಪಕ್ಷಗಳ ಮೌಲ್ಯಮಾಪನ**

---

[2] ಹಸನ್, ಜೋಯಾ., (2002). ಪಾರ್ಟೀಸ್ ಆ್ಯಂಡ್ ಪಾರ್ಟಿ ಪೊಲಿಟಿಕ್ಸ್ ಇನ್ ಇಂಡಿಯಾ,

[3] https://www.egyankosh.ac.in/bitstream/123456789/77249/1/Unit-4.pdf

ಭಾರತೀಯ ಪ್ರಜಾತಂತ್ರದ ವಿಪರ್ಯಾಸಕರ ಸಂಗತಿ ಎಂದರೆ ಇಲ್ಲಿ ವಿರೋಧ ಪಕ್ಷವು ಆಡಳಿತ ಪಕ್ಷದ ಪ್ರತಿಯೊಂದು ಹೆಜ್ಜೆಯನ್ನು ವಿರೋಧಿಸಲೇಬೇಕೆಂಬ ಅಘೋಷಿತ ನಿಯಮವನ್ನು ಪಾಲಿಸಿರುವಂತೆ ಕಂಡುಬರುತ್ತದೆ. ಆದ್ದರಿಂದಲೇ ಸಂಸತ್ತಿನಲ್ಲಿ ಮಸೂದೆ ಮಂಡಿಸುವ ಸಂದರ್ಭದಲ್ಲಿ ಪ್ರತಿಪಕ್ಷದ ಜೊತೆಗೆ ಸರ್ಕಾರ ಎಂದೂ ಸಮಾಲೋಚಿಸುವುದಿಲ್ಲ. ಸಂಸತ್ತಿನಲ್ಲಿ ಸರ್ಕಾರ ಮತ್ತು ಪ್ರತಿ ಪಕ್ಷಗಳು ರಾಷ್ಟ್ರ–ರಾಜ್ಯದ ಸಾಮಾಜಿಕ ಸಮಸ್ಯೆಗಳ ಕುರಿತು ಚರ್ಚೆಗಳನ್ನು ನಡೆಸಬೇಕೆಂಬ ಪರಿಜ್ಞಾನ ಹೊಂದದೆ ಇರುವುದು ದುರಾದೃಷ್ಟ.

ಸಂಸತ್ತಿನಲ್ಲಿ ನಡೆಸುವ ರಾಜಕೀಯ ಚರ್ಚೆಗಳಲ್ಲಿ ವೈಯಕ್ತಿಕ ನಿಂದನೆಗಳನ್ನು ಮಾಡುವುದರಲ್ಲಿ ಕಲಾಪದ ಸಮಯವನ್ನು ವ್ಯರ್ಥ ಮಾಡುವುದನ್ನು ಬಿಡಬೇಕು. ಪಕ್ಷಗಳು ರಾಜಕಾರಣದಲ್ಲಿಯೇ ತಲ್ಲೀಣರಾಗಿರುವುದರಿಂದ ರಾಷ್ಟ್ರದ ಪ್ರಜಾಸತ್ಯಯ ವ್ಯವಸ್ಥೆಯು ಕುಸಿಯುತ್ತಿರುವ ಸಂಗತಿ ನಮ್ಮ ರಾಜಕೀಯ ಪಕ್ಷಗಳಿಗೆ ಅರ್ಥವಾಗದೆ ಇರುವುದು ವಿಪರ್ಯಾಸ.

**ಸಮಾರೋಪ**

ಸಂಸದೀಯ ವ್ಯವಸ್ಥೆಯಲ್ಲಿ ಪಕ್ಷಗಳಿಗೆ ಮುಕ್ತವಾದ ಸ್ವಾತಂತ್ರ್ಯವಿದೆ. ಸಂಸತ್ತಿನ ಘನತೆ ಗೌರವವನ್ನು ಕಾಪಾಡುವುದು ಪಕ್ಷಗಳ ಕರ್ತವ್ಯ. ಆದರೆ ಸಂಸತ್ತಿನ ಕಾರ್ಯಕಲಾಪವನ್ನೇ ಸ್ಥಗಿತಗೊಳಿಸುವ ಹಕ್ಕು ಯಾವ ಪಕ್ಷಕ್ಕೂ ಇಲ್ಲ ಜನತಾಂತ್ರಿಕ ವ್ಯವಸ್ಥೆಯ ಜೀವಾಳವೇ ಸಹನೆ, ಎದುರಾಳಿಯ ಮಾತನ್ನು ಕೇಳುವ ವ್ಯವದಾನ ಎಲ್ಲ ಪಕ್ಷಗಳಿಗೂ ಇರಬೇಕು. ಸಂಸದೀಯ ನಡವಳಿಕೆಯ ನಿಯಂತ್ರಣಕ್ಕೆ ಸಂಸತ್ತೇ ರಚಿಸಿಕೊಂಡಿರುವ ನಿಯಮಗಳಿವೆ. ಅದರಲ್ಲೂ ಧರಣಿ–ಗೊಂದಲಕ್ಕೆ ಅವಕಾಸವಿಲ್ಲ. ಸಂಸತ್ತಿನಲ್ಲಿನ ಹಠಮಾರಿತನಕ್ಕೂ ಪಕ್ಷಗಳು ಒಂದು ಮಿತಿ ಹಾಕಿಕೊಂಡು ರಾಜಕೀಯ ಪಕ್ಷಗಳು ಆತ್ಮವಿಮರ್ಶೆ ಮಾಡಿಕೊಳ್ಳದಿದ್ದರೆ ಪಕ್ಷಗಳಿಗೆ ಮಾತ್ರವಲ್ಲ ಪ್ರಜಾತಂತ್ರ ವ್ಯವಸ್ಥೆಗೆ ಉಳಿಗಾಲವಿಲ್ಲ.

**ಆಧಾರ ಗ್ರಂಥಗಳು**


1. ದಿವಾಕರ್, ರೇಖಾ. *ಪಾರ್ಟಿ ಸಿಸ್ಟಮ್ಸ್ ಇನ್ ಇಂಡಿಯಾ*, ಇಂಡಿಯಾ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, 2017
2. ಪೈ, ಸುಧಾ. *ಹ್ಯಾಂಡಬುಕ್ ಆಫ್ ಪೊಲಿಟಿಕ್ಸ್ ಇನ್ ಇಂಡಿಯನ್ ಸ್ಟೇಟ್ಸ್: ರೀಜನ್ಸ್, ಪಾರ್ಟೀಸ್ ಆ್ಯನ್ ಎಕನಾಮಿಕ ರೀಫಾರ್ಮ್ಸ್*, ಇಂಡಿಯಾ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, 2013
3. ಜಯಲ್, ನಿರಜ್ ಗೋಪಾಲ್. ಪ್ರತಾಪ್ ಭಾನು ಮೆಹ್ತಾ. (ಇಡಿ), *ಪೊಲಿಟಿಕ್ಸ್ ಇನ್ ಇಂಡಿಯಾ*, ನ್ಯೂ ದೆಲ್ಲಿ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರಸ್, 2010
4. ಸಾರ್ಟೋರಿ, ಜಿಯೊವನ್ನಿ. *ಪಾರ್ಟೀಸ್ ಆ್ಯಂಡ್ ಪಾರ್ಟಿ ಸಿಸ್ಟಮ್ಸ್: ಎ ಫ್ರೇಮ್‌ವರ್ಕ್ ಫಾರ್ ಎನಾಲಿಸಿಸ್*, ಇಂಗ್ಲೆಂಡ್, ಇಸಿಪಿಆರ್, 2005
5. ಬೈಜೆನ್, ಇನ್‌ಗ್ರೀಡ್ ವ್ಯಾನ್. *ಪೊಲಿಟಿಕಲ್ ಪಾರ್ಟೀಸ್ ಇನ್ ನ್ಯೂ ಡೆಮಾಕ್ರಸೀಸ್*, ನ್ಯೂ ಯಾರ್ಕ್, ಪಲ್‌ಗ್ರೇವ್ ಮ್ಯಾಕ್‌ಮೀಲನ್, 2003
6. ವೇರ್, ಅಲನ್. *ಪೊಲಿಟಿಕಲ್ ಪಾರ್ಟೀಸ್ ಆ್ಯಂಡ್ ಪಾರ್ಟಿ ಸಿಸ್ಟಮ್ಸ್*, ನ್ಯೂ ಯಾರ್ಕ್, ಆಕ್ಸ್‌ಫರ್ಡ್ ಯುನವರ್ಸಿಟಿ ಪ್ರೆಸ್, 1996
7. http://ipublisher.in/I/a/89083
8. https://old.amu.ac.in/emp/studym/99998669.pdf